**ಸಿ ಮಿಸ್ ನಂ. 681/2026** **ಪಿ ಡಬ್ಲ್ಯೂ 1**

ದಿನಾಂಕ 10.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಅರ್ಜಿದಾರರ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿರುತ್ತದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಅಲಭ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ತಾಯಿ ಕಾರ್ಡ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ–2 ಎಂದು, ಅರ್ಜಿದಾರರ ನೋಟರಿ ಧೃಡೀಕೃತ ಆಧಾರ್ ಕಾರ್ಡ್ ನ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ–3ಎಂದು ಗುರುತಿಸಲಾಯಿತು. ಶ್ರೀಮತಿ ನಾಗವೇಣಿ ರವರ ಸಾಲ ದಾಖಲಾತಿ ನಕಲಿನ ದೃಢೀಕರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–4 ಎಂದು ಗುರುತಿಸಲಾಯಿತು. (ನಿಪಿ–2 ಮತ್ತು 3 ನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ಅರ್ಜಿದಾರರಿಗೆ ವಾಪಸ್ಸು ಮಾಡಲಾಗಿದೆ)

(ಮೂಲ ದಾಖಲೆಗಳನ್ನು ನೋಡಿ ಅದನ್ನು ತಾಳೆ ಮಾಡಿ ನಕಲು ಪ್ರತಿಯನ್ನು ಗುರುತಿಸಲಾಯಿತು.)

ಪಾಟೀ ಸವಾಲುಃ ಎದುರುದಾರರು ಏಕಪಕ್ಷೀಯವಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ